# **OS No.105/2021**

PW-1

ದಿನಾಂಕಃ **17.04.2025** ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ವಕೀಲರಿಂದಃ**

ನಾನು ಹುಣಸಘಟ್ಟ ಗ್ರಾಮದ ವಾಸಿ ಎಂದರೆ ಸರಿ. ನನ್ನ ಮನೆ ಮತ್ತು 1 ನೇ ಪ್ರತಿವಾದಿಯ ಮನೆ ಅಕ್ಕ-ಪಕ್ಕದಲ್ಲಿದೆ. ಸುಮಾರು 50 ಅಡಿ ಅಂತರ ಇರಬಹುದು. 2015 ರಿಂದ ನಾನು ಮತ್ತು 1 ನೇ ಪ್ರತಿವಾದಿ ನಮ್ಮ ನಮ್ಮ ಮನೆಗಳಲ್ಲಿ ಬೇರೆ ಬೇರೆಯಾಗಿ ವಾಸ ಮಾಡುತ್ತಿದ್ದೇವೆ. ನಮ್ಮ ಸಹೋದರಿಯನ್ನು 1 ನೇ ಪ್ರತಿವಾದಿಯ ಹೆಂಡತಿಯ ತವರು ಮನೆಗೆ ಕೊಟ್ಟು ಮದುವೆ ಮಾಡಲಾಗಿದೆ ಎಂದರೆ ಸರಿ. ಅಡಿಕೆ ತೋಟದ ಪೂರ್ವ ಮತ್ತು ಪಶ್ಚಿಮ ಭಾಗಗಳಲ್ಲಿ ಕೊಳವೆ ಬಾವಿಗಳನ್ನು ಕೊರೆಸಲಾಗಿದೆ. ನಾನು ಮತ್ತು 1 ನೇ ಪ್ರತಿವಾದಿ ವಾಸ ಮಾಡುವ ಮನೆಗಳು ಪಿತ್ರಾರ್ಜಿತವಾಗಿ ಬಂದ ಮನೆಗಳಾಗಿರುತ್ತವೆ. ನಾವು 2004 ಕ್ಕಿಂತ ಪೂರ್ವದಲ್ಲಿಯೇ ವಿಭಾಗ ಮಾಡಿಕೊಂಡು ಬೇರೆ ಬೇರೆ ವಾಸ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ನನ್ನ ಮದುವೆ ಆಗಿರುವುದೇ 2006 ರಲ್ಲಿ ಎಂದು ಹೇಳುತ್ತಾರೆ.

ನಮ್ಮ ತಂದೆ ತೀರಿಕೊಂಡ ನಂತರ 1 ನೇ ಪ್ರತಿವಾದಿ ಹಿರಿಯ ಮಗನಾಗಿರುವ ಕಾರಣ ಆತನ ಹೆಸರಿಗೆ ಆಸ್ತಿಗಳು ವರ್ಗಾವಣೆ ಆದವು ಎಂದರೆ, ಸಾಕ್ಷಿಯು ಕೇಲವು ಆಸ್ತಿಗಳು ಜಂಟಿ ವರ್ಗಾವಣೆ ಆಗಿವೆ ಎಂದು ಹೇಳುತ್ತಾರೆ. ನಮ್ಮ ಕುಟುಂಬದಲ್ಲಿ ಕೃಷಿ ಚಟುವಟಿಕೆಗಳನ್ನು ನನ್ನ ಅಣ್ಣ ಅಂದರೆ 1 ನೇ ಪ್ರತಿವಾದಿ ಮಾಡುತ್ತಿದ್ದರು ಎಂದರೆ, ಸಾಕ್ಷಿಯು ನಾನು ವಯಸ್ಕನಾಗುವವರೆಗು ಮಾಡಿದ್ದಾರೆ ಎಂದು ನುಡಿಯುತ್ತಾರೆ. ಆತನೇ ಕಷ್ಟಪಟ್ಟು ಜಮೀನುಗಳು ಅಭಿವೃದ್ಧಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನಾನು ಸಣ್ಣ-ಪುಟ್ಟ ಅಡಿಕೆ ವ್ಯಾಪಾರ ಮಾಡಿಕೊಂಡಿದ್ದೆ ಎಂದರೆ ಸರಿಯಲ್ಲ. 2004 ಕ್ಕಿಂತ ಪೂರ್ವದಲ್ಲಿಯೇ ವಿಭಾಗ ಆಗಿದ್ದರೂ ಕೂಡ ನನ್ನ ಸಹೋದರನಿಗೆ ತೊಂದರೆ ಕೊಡಲು ಸುಳ್ಳು ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಕೂಡ ತನ್ನ ಪಾಲಿನ ರೂಪದಲ್ಲಿ ಸಾಕಷ್ಟು ಹಣವನ್ನು ಪಡೆದುಕೊಂಡು ಹೋಗಿದ್ದಾನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ವಕೀಲರಿಂದಃ**

2 ನೇ ಪ್ರತಿವಾದಿಯನ್ನು ಮತ್ತು ಅವರ ಪರ ವಕೀಲರನ್ನು ಕೂಗಿಸಲಾಯಿತು, ಗೈರು ಹಾಜರಿರುತ್ತಾರೆ. ಕಾರಣ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾದಂ., ರವರ ನ್ಯಾಯಾಲಯ, ತರೀಕೆರೆ.